# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಯಲಹಂಕ ಉಪನಗರ ಉಪವಿಭಾಗ, ಬೆಂಗಳೂರು.

ದಿನಾಂಕ:20-08-2022 ರಂದು ಬೆಳಿಗ್ಗೆ 11.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ:04 ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳ ಜೊತೆ ಯಲಹಂಕ ಉಪನಗರ ಉಪವಿಭಾಗ ಕಛೇರಿಯಲ್ಲಿ ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ಎಸ್.ಪಿ.ರಂಗನಾಥ್ ರವರು | ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿ.ಬಿ.ಎಂ.ಪಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳ ಜೊತೆ |
| 2 | ಶ್ರೀ.ಸಚಿನ್.ಹೆಚ್.ಪಿ. | ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪವಿಭಾಗ, ಬಿ.ಬಿ.ಎಂ.ಪಿ |
| 3 | ಶ್ರೀ.ಮಹಾಂತೇಶ್.ಸಿ | ಸಹಾಯಕ ಇಂಜಿನಿಯರ್, ರಸ್ತೆ ಮೂಲಭೂತ ಸೌಕರ್ಯ |
| 4 | ಶ್ರೀ.ವಿನಾಯಕ | ಸಹಾಯಕ ಇಂಜಿನಿಯರ್, ಬಿ.ಡಬ್ಲ್ಯು.ಎಸ್.ಎಸ್.ಬಿ |
| 5 | ಶ್ರೀ.ಮೋಹನ್.ಎನ್.ಡಿ | ಸಹಾಯಕ ಅಭಿಯಂತರರು ವಾರ್ಡ್ ನಂ:04 |
| 6 | ಶ್ರೀ.ಭಾರ್ಗವ್ | ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ, ಯಲಹಂಕ ಉಪನಗರ ಉಪವಿಭಾಗ |
| 8 | ಶ್ರೀ.ಎಂ.ಎಸ್.ಕಾಂತ | ಸಾರ್ವಜನಿಕರು |
| 9 | ಶ್ರೀ.ಎಂ.ಐ.ಸಾವಾದ್ | ರಿಟೈರ್ಡ್ ಆಫೀಸರ್ |
| 10 | ಶ್ರೀ.ಬಿ.ಎಸ್.ಬೋರೇಗೌಡ | ಸಾರ್ವಜನಿಕರು |
| 11 | ಶ್ರೀ.ಚಂದ್ರಪ್ಪ | ಸಾರ್ವಜನಿಕರು |
| 12 | ಶ್ರೀ.ಕೆ.ಟಿ.ಗಂಗಾಧರ | ಸಾರ್ವಜನಿಕರು |
| 13 | ಶ್ರೀ.ಟಿ.ಕೆ.ಪುಟ್ಟಸ್ವಾಮಿ | ಸಾರ್ವಜನಿಕರು |
| 14 | ಶ್ರೀ.ಸಂಗಪ್ಪ ಸಂಗಮ್ | ಸಾರ್ವಜನಿಕರು |
| 15 | ಶ್ರೀ.ಜಯರಾಮಸ್ವಾಮಿ | ಸಾರ್ವಜನಿಕರು |
| 16 | ಶ್ರೀ.ಹೆಚ್.ಆರ್.ರಾಜಗೋಪಾಲ್ | ಸಾರ್ವಜನಿಕರು |

ಸಹಾಯಕ ಅಭಿಯಂತರರು ಆದ & ವಾರ್ಡ್ ಕಮಿಟಿ ಕಾರ್ಯಾದರ್ಶಿಯಾದ **ಶ್ರೀ.ಎನ್.ಡಿ.ಮೋಹನ್**, ಸಹಾಯಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ರವರು ಸಭೆಗೆ ಹಾಜರಿದ್ದು, ನೋಡಲ್ ಅಧಿಕಾರಿಗಳು ಹಾಗೂ ಭಾಗವಹಿಸಿದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ನೋಡಲ್ ಅಧಿಕಾರಿಯನ್ನು ಕೋರಿದರು.

ಶ್ರೀ.ಎಸ್.ಪಿ.ರಂಗನಾಥ್ ರವರು ಮುಖ್ಯ ಅಭಿಯಂತರರು (ಯಲಹಂಕ), ಬಿ.ಬಿ.ಎಂ.ಪಿ ಹಾಗೂ ಸಮಿತಿಯ ನೋಡಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ದಿನದ ಸಭೆಯಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ವಿವರಣೆ ಕೇಳಿದರು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮತೆಗೆದು ಕೊಳ್ಳಬೇಕಾಗಿರುವ ಅಧಿಕಾರಿ / ಇಲಾಖೆ |
|---|---|---|---|
| 1 | ಮಾತೃ ಬಡಾವಣೆಯ 5ನೇ ಕ್ರಾಸ್‌ನಲ್ಲಿ ಚರಂಡಿ ನಿರ್ಮಿಸಿರದ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದರು. | ಚರಂಡಿ ನಿರ್ಮಿಸಲು ನಿವೇಶನದ ಮಾಲೀಕರಾದ ದೇವರಾಜು ರವರನ್ನು ಮಾತೃ ಬಡಾವಣೆಯ ನಿವಾಸಿಗಳ ಸಂಘದವರು ಮಾತುಕಥೆ ಮಾಡಿ ನಿವೇಶನದ ಮಾಲೀಕರನ್ನು ಒಪ್ಪಿಸಿದಲ್ಲಿ ಚರಂಡಿಯನ್ನು ನಿರ್ಮಿಸಲಾಗುವುದೆಂದು ತಿಳಿಸಲಾಯಿತು. | |
| 2 | 3ನೇ ಹಂತ, ರಾಗಿ ಮಿಲ್ ರಸ್ತೆಯನ್ನು ಬಿ.ಡಬ್ಲ್ಯು.ಎಸ್.ಎಸ್.ಬಿ ರವರು ಕತ್ತರಿಸಿ ರೆಸ್ಟೋರೇಷನ್ ಮಾಡದಿರುವ ಬಗ್ಗೆ. | ಬಿ.ಡಬ್ಲ್ಯು.ಎಸ್.ಎಸ್.ಬಿ ರವರು ಒಳಚರಂಡಿಗಾಗಿ ಕತ್ತರಿಸಿರುವುದರಿಂದ ಇದರ ರಸ್ತೆಯನ್ನು ದುರಸ್ಥಿಪಡಿಸಲು ಬಿ.ಡಬ್ಲ್ಯು.ಎಸ್.ಎಸ್.ಬಿ ರವರಿಗೆ ಸೂಚಿಸಲಾಯಿತು. | ಸ.ಕಾ.ಅ ಬಿ.ಡಬ್ಲ್ಯು.ಎಸ್.ಎಸ್.ಬಿ |
| 3 | ಯಲಹಂಕ ಉಪನಗರ ಮುಖ್ಯರಸ್ತೆಯಲ್ಲಿ ಆದಷ್ಟು ಶೀಘ್ರವಾಗಿ ಕಾಮಗಾರಿ ಕೆಲಸವನ್ನು ಮುಗಿಸಿಕೊಡಲು ಮತ್ತು ಅಲ್ಲಿನ ಮರಗಳ ರೆಂಬೆಗಳನ್ನು ಟ್ರಿಮ್ ಮಾಡಿಕೊಡಲು ಕೋರಿರುತ್ತಾರೆ. | ಅರಣ್ಯ ಇಲಾಖೆ ರವರಿಗೆ ಕ್ರಮವಹಿಸಲು ಸಭೆಯಲ್ಲಿ ಸೂಚಿಸಲಾಗಿದೆ. | ಅರಣ್ಯ ಇಲಾಖೆ ಬಿ.ಬಿ.ಎಂ.ಪಿ, ಯಲಹಂಕ ವಲಯ, |
| 4 | ಯಲಹಂಕ ಮುಖ್ಯರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿಯಿಂದ ಅಂಗಡಿಗಳನ್ನು ಫುಟ್‌ಪಾತ್‌ನ ಮೇಲೆ ಇರಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. | ಪ್ರಾಜೆಕ್ಟ್ ವಿಭಾಗದಲ್ಲಿ ಕಾಮಗಾರಿಯನ್ನು ಅತಿ ಶೀಘ್ರದಲ್ಲಿ ಮುಗಿಸಿಕೊಡಲು ವಾರ್ಡ್ ಕಮಿಟಿ ಸಭೆಯಲ್ಲಿ ತಿಳಿಸಲಾಗಿದೆ. | ಪ್ರಾಜೆಕ್ಟ್ ವಿಭಾಗ ಯಲಹಂಕ ವಲಯ |
| 5 | ವಿನಾಯಕ ಪಾರ್ಕ್ ಹತ್ತಿರ ಸಾರ್ವಜನಿಕರು ಕಸಗಳನ್ನು ತಂದು ತುಂಬುವುದರಿಂದ ವಾಸನೆ ಬರುತ್ತಿದ್ದು, ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. | ಕಿರಿಯ ಆರೋಗ್ಯ ಪರಿವೀಕ್ಷಕರು, ಯಲಹಂಕ ಉಪನಗರ ರವರು ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗುವುದು. | ಸಕಾಅ ಘನತ್ಯಾಜ್ಯ ನಿರ್ವಹಣಾ ಕೋಶ, ಬಿ.ಬಿ.ಎಂ.ಪಿ |
| 6 | ಯಲಹಂಕ 8ನೇ ಎ ಮುಖ್ಯರಸ್ತೆ ಮರವನ್ನು ಕಡಿಯಲು ಕೋರಿರುತ್ತಾರೆ. | ಅರಣ್ಯ ಇಲಾಖೆಯವರಿಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗುವುದು. | ಅರಣ್ಯ ಇಲಾಖೆ ಯಲಹಂಕ ವಲಯ |
| 7 | ಕೆಂಪೇಗೌಡ ಪಾರ್ಕ್‌ನಲ್ಲಿ ದೀಪಗಳು ಹಾಳಾಗಿರುವ ಬಗ್ಗೆ ಸರಿಪಡಿಸಿಕೊಡಲು ಕೋರಿರುತ್ತಾರೆ. | ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ದೀಪವನ್ನು ಅಳವಡಿಸಿಕೊಡಲು ಸಭೆಯಲ್ಲಿ ಸೂಚಿಸಿದೆ. | ಎಲೆಕ್ಟ್ರಿಕಲ್ ಗುತ್ತಿಗೆದಾರರು |

ಈ ಮೇಲ್ಕಂಡ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ತಾವು ತೆಗೆದುಕೊಂಡಿರುವ ಕ್ರಮಗಳನ್ನು ಮುಂದಿನ ವಾರ್ಡ್ ಕಮಿಟಿ ಸಭೆಯು ನಡೆಯುವ ವೇಳೆಗಿಂತ ಮುಂಚಿತವಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ ಮತ್ತು ವಾರ್ಡ್ ಕಮಿಟಿ ಸಭೆಗಳಿಗೆ ತಪ್ಪದೇ ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ.

ಶ್ರೀ.ಎನ್.ಡಿ.ಮೋಹನ್
ಸಹಾಯಕ ಅಭಿಯಂತರರು ಹಾಗೂ
ಕಾರ್ಯದರ್ಶಿಗಳು, ವಾರ್ಡ್ ನಂ:04

ಶ್ರೀ.ಎಸ್.ಪಿ.ರಂಗನಾಥ್ ರವರು
ಮುಖ್ಯ ಅಭಿಯಂತರರು
ಹಾಗೂ ನೋಡಲ್ ಅಧಿಕಾರಿಗಳು.
ಯಲಹಂಕ ನ್ಯೂ ಟೌನ್, ವಾರ್ಡ್ ನಂ:04

ಪ್ರತಿಯನ್ನು:-

1) ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
2) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ (ಯಲಹಂಕ) / ವಿದ್ಯುತ್, ಬಿ.ಬಿ.ಎಂ.ಪಿ
3) ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಜಕಾಲುವೆ (ಯಲಹಂಕ)
4) ಅಧೀಕ್ಷಕರು ತೋಟಗಾರಿಕೆ ಇಲಾಖೆ, ಬಿ.ಬಿ.ಎಂ.ಪಿ (ಯಲಹಂಕ)
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ (ಯಲಹಂಕ)
6) ಠಾಣಾಧಿಕಾರಿಗಳು / ಟ್ರಾಫಿಕ್ ಠಾಣಾಧಿಕಾರಿಗಳು, ಪೋಲೀಸ್ ಠಾಣೆ, ಯಲಹಂಕ ಉಪನಗರ / ಯಲಹಂಕ ರವರಿಗೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆ ಅಭಿವೃದ್ಧಿ (ಯಲಹಂಕ)
8) ಅರಣ್ಯ ಅಧಿಕಾರಿ, ಯಲಹಂಕ ವಲಯ, ಬಿ.ಬಿ.ಎಂ.ಪಿ, ಯಲಹಂಕ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಬಿ.ಬಿ.ಎಂ.ಪಿ, ಬ್ಯಾಟರಾಯನಪುರ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ, ಬಿ.ಬಿ.ಎಂ.ಪಿ (ಯಲಹಂಕ).
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ ಒಳಚರಂಡಿ, ಯಲಹಂಕ.
12) ಆರೋಗ್ಯ ವೈದ್ಯಾಧಿಕಾರಿಗಳು, ಯಲಹಂಕ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು.
13) ಪಶು ಸಂಗೋಪನೆ ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಿದೆ.